ಒ.ಎಸ್.ನಂ:59/2018
ಡಿ.ಡಬ್ಲೂ.1

**ದಿ:06.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:-**ವಾದಿ ಪರ ಶ್ರೀ.**E.S.I.,** ವಕೀಲರಿಂದ:-

ನಾನು ಎಸ್ಎಸ್ಎಲ್ಸಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಈಗ ಪ್ರಸ್ತುತ ಶಿಕ್ಷಣ ಇಲಾಖೆಯಲ್ಲಿ ಜಿಲ್ಲಾ ತರಬೇತಿ ಸಂಸ್ಥೆ, ಚಿತ್ರದುರ್ಗದಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಸನ್ ಕೆಲಸ ಮಾಡುತ್ತಿದ್ದೇನೆ . ನಾನು ದ್ವಿತೀಯ ದರ್ಜೆ ಸಹಾಯಕರಾಗಿ ಸನ್ 2010 ರಲ್ಲಿ ಕರ್ತವ್ಯಕ್ಕೆ ಸೇರಿಕೊಂಡಿರುತ್ತೇನೆ . ಸದರಿ ಕೆಲಸ ನನಗೆ ನನ್ನ ಗಂಡ ಬಸವರಾಜ್ ಅವರ ಮರಣಾ ನಂತರ ಪರಿಹಾರವಾಗಿ ಶಿಕ್ಷಣ ಇಲಾಖೆಯಿಂದ ಸಿಕ್ಕಿರುತ್ತದೆ . ವಾದಿ 1 ರತ್ನಮ್ಮ ಅವರು ನನ್ನ ಅತ್ತೆ , ವಾದಿ 2 ನನ್ನ ನಾದಿನಿ ಆಗಬೇಕು ಎಂದರೆ ಸರಿ. ವಾದಿ 1 ರತ್ನಮ್ಮ ಅವರಿಗೆ ವಾದಿ 2 ಸುಧಾ , ನಾಗರಾಜ್ ಮತ್ತು ನನ್ನ ಗಂಡ ಬಸವರಾಜ್ ರವರು ಮಕ್ಕಳು ಇರುತ್ತಾರೆ ಎಂದರೆ ಸರಿ. ಸದರಿ ನಾಗರಾಜ್ ಅವರು ಮದುವೆ ಪೂರ್ವದಲ್ಲಿ ಮರಣಹೊಂದಿರುತ್ತಾರೆ . ನಮ್ಮ ಮಾವ ವಾದಿ 1 ರತ್ನಮ್ಮ ಅವರ ಗಂಡನನ್ನು ಗೌಡರ ಮಲ್ಲಿಕಾರ್ಜುನಪ್ಪ ಎಂದು ಕರೆಯುತ್ತಾರೆ ಎಂದರೆ ಸರಿ. ಸದರಿ ಗೌಡರ ಮಲ್ಲಿಕಾರ್ಜುನಪ್ಪ ಅವರ ತಂದೆ ಹೆಸರು ಗೌಡರ ನಿಂಗಪ್ಪ ಇರುತ್ತದೆ ಎಂದರೆ ಸರಿ. ಸದರಿ ನಿಂಗಪ್ಪರವರಿಗೆ 2 ಹೆಂಡತಿಯರು ಇರುತ್ತಾರೆ , ಮೊದಲ ಹೆಂಡತಿ ಹೆಸರು ಮಹಾದೇವಮ್ಮ , ಎರಡನೇ ಹೆಂಡತಿ ಹೆಸರು ಬಸಮ್ಮ ಇರುತ್ತಾರೆ ಎಂದರೆ ಸರಿ. ಸದರಿ ಗೌಡರ ನಿಂಗಪ್ಪ ಮತ್ತು ಮಹಾದೇವಮ್ಮ ಅವರಿಗೆ ಬಸವನಗೌಡ , ನಮ್ಮ ಮಾವ ಮಲ್ಲಿಕಾರ್ಜುನ , ಸಿದ್ದಮ್ಮ ಮತ್ತು ಬಸಮ್ಮ ಮಕ್ಕಳು ಇರುತ್ತಾರೆ ಎಂದರೆ ಸರಿ. ಗೌಡರ ನಿಂಗಪ್ಪ ಅವರು ತಮಗೆ ಸೇರಿದ ಎಲ್ಲಾ ಆಸ್ತಿಗಳನ್ನು ಬಿಟ್ಟು ಮರಣಹೊಂದಿರುತ್ತಾರೆ ಎಂದರೆ ಸರಿ. ಸದರಿ ಗೌಡರ ನಿಂಗಪ್ಪ ಅವರ ಮರಣಾ ನಂತರ ಮೊದಲ ಹೆಂಡತಿ ಮತ್ತು ಎರಡನೇ ಹೆಂಡತಿ ಮಕ್ಕಳು ಎಲ್ಲರೂ ಸೇರಿ ಆಸ್ತಿಗಳನ್ನು ಹಂಚಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಹೆಣ್ಣು ಮಕ್ಕಳು ಹಂಚಿಕೊಂಡಿರುವುದಿಲ್ಲ ಗಂಡು ಮಕ್ಕಳು ಮಾತ್ರ ಹಂಚಿಕೊಂಡಿರುತ್ತಾರೆ ಎಂದು ಹೇಳುತ್ತಾರೆ .

2. ದಾವಾ ಆಸ್ತಿ ಐಟಂ ನಂಬರ್ ಸರ್ವೆ ನಂಬರ್ 3/2 ಎ ಮತ್ತು ಐಟಂ ನಂಬರ್ ಸರ್ವೆ ನಂಬರ್

9/4 ಆಸ್ತಿಗಳು ನಮ್ಮ ಮಾವ ಮಲ್ಲಿಕಾರ್ಜುನಪ್ಪ ಅವರಿಗೆ ಅವರ ತಂದೆ ನಿಂಗಪ್ಪ ಅವರ ಕುಟುಂಬದಿಂದ ಪಾಲುವಿಭಾಗದಲ್ಲಿ ಬಂದಿರುತ್ತದೆ ಎಂದರೆ ಸರಿ. ಸದರಿ ಆಸ್ತಿಗಳು ನಮ್ಮ ಮಾವ ಮಲ್ಲಿಕಾರ್ಜುಪ್ಪ ಅವರಿಗೆ ಸನ್ 1983-84 ರಲ್ಲಿ ಪಾಲುವಿಭಾಗ ಮೂಲಕ ಬಂದಿರುತ್ತದೆ ಎಂದರೆ ಸರಿ. ಸದರಿ ಐಟಂ ನಂಬರ್ 1 ಮತ್ತು 2 ಆಸ್ತಿಗಳು ಮಲ್ಲಿಕಾರ್ಜುನಪ್ಪ ಅವರಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದರೆ ಸರಿ. ನಮ್ಮ ಮಾವ ಮಲ್ಲಿಕಾರ್ಜುನಪ್ಪ ಅವರು ದಿಃ 27.02.1999 ರಲ್ಲಿ ಮರಣಾ ನಂತರ ದಾವಾ ಆಸ್ತಿಗಳನ್ನು ವಾದಿ ರತ್ನಮ್ಮ ಮತ್ತು ಅವರ ಮಕ್ಕಳು ಎಲ್ಲಾರು ಜಂಟಿ ಸ್ವಾಧೀನ ಇರುತ್ತಾರೆ ಎಂದರೆ ಸರಿ. ನನ್ನ ಮಾವ ಮಲ್ಲಿಕಾರ್ಜುನಪ್ಪ ಅವರು ಜೀವಂತ ಇರುವ ಕಾಲಕ್ಕೆ ಮರಣಾ ಶಾಸನ ಬರೆದಿರುವ ಬಗ್ಗೆ ನನಗೆ ಗೋತ್ತಿಲ್ಲ. ನನ್ನ ಮಾವ ಮಲ್ಲಿಕಾರ್ಜುನಪ್ಪ ಅವರು ಮರಣಾನಂತರ ವಾದಿ ರತ್ನಮ್ಮ ಮತ್ತು ನನ್ನ ಗಂಡ ಮತ್ತು ಅವರ ಮಕ್ಕಳು ಪಾಲುವಿಭಾಗ ಮಾಡಿಕೊಂಡ ಬಗ್ಗೆ ನನಗೆ ಗೋತ್ತಿಲ್ಲ . ವಾದಿ 1 ರತ್ನಮ್ಮ ಅವರು ಜೀವಂತ ಇರುವವರೆಗೂ ಪಾಲುವಿಭಾಗ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆಸಿ ದಾನಪತ್ರ ಮಾಡಿರುತ್ತಾರೆ ಎಂದು ಹೇಳುತ್ತಾರೆ . ಯಾರಿಗೆ ದಾನ ಪತ್ರ ಆಗಿರುತ್ತದೆ ಎಂದರೆ ಸಾಕ್ಷಿ ವಾದಿ 2 ಸುಧಾ ಅವರಿಗೆ ಸರ್ವೆ ನಂಬರ್ 12/5 ಮತ್ತು 12/6 ರಲ್ಲಿ ವಾದಿ 1 ರತ್ನಮ್ಮ ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ . ಸದರಿ ಸರ್ವೆ ನಂಬರ್ 12/5 ಮತ್ತು 12/6 ಆಸ್ತಿಗಳನ್ನು ನಮ್ಮ ಮಾವ ಮಲ್ಲಿಕಾರ್ಜುನಪ್ಪ ಅವರು ಸ್ವಂತ ಖರೀದಿ ಮಾಡಿ ರತ್ನಮ್ಮ ಅವರ ಹೆಸರಿಗೆ ಮಾಡಿಕೊಟ್ಟಿರುತ್ತಾರೆ . ಸದರಿ ಖರೀದಿ ಪತ್ರ ಯಾವ ದಿನಾಂಕ ಆದ ಬಗ್ಗೆ ನನಗೆ ನೆನಪಿರುವುದಿಲ್ಲ . ನಾನು ಸದರಿ ಖರೀದಿ ಪತ್ರ ರಚಿಸಿದ ಕಾಲಕ್ಕೆ ನಾನು ಹಾಜರು ಇರಲಿಲ್ಲ , ಸಾಕ್ಷಿ ಮುಂದುವರೆಸಿ ನನ್ನ ಅತ್ತೆ ತಿಳಿಸಿರುತ್ತಾರೆ ಎಂದು ಹೇಳುತ್ತಾರೆ . ಯಾವಾಗ ತಿಳಿಸಿರುತ್ತಾರೆ ನನಗೆ ನೆನಪಿರುವುದಿಲ್ಲ . ಸದರಿ ಸರ್ವೆ ನಂಬರ್ 12/5 ಮತ್ತು 12/6 ನಮ್ಮ ಮಾವ ಖರೀದಿ ಮಾಡಿದ ಬಗ್ಗೆ ದಾಖಲೆಗಳನ್ನು ನಾನು ನೋಡಿರುತ್ತೇನೆ . ಈ ಎಲ್ಲಾ ವಿಚಾರಗಳನ್ನು ನನ್ನ ತಕರಾರಿನಲ್ಲಿ ತಿಳಿಸಿರುವುದಿಲ್ಲ. ಈ ಬಗ್ಗೆ ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ತಿಳಿಸಿರುತ್ತೇನೆ ಎಂದರೆ ಸರಿ. ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಐಟಂ ನಂಬರ್ 1 ಮತ್ತು 2 ಆಸ್ತಿಗಳಲ್ಲಿ ಮಲ್ಲಿಕಾರ್ಜುನಪ್ಪ ಅವರ

ಎಲ್ಲಾ ಮಕ್ಕಳಿಗೂ ಸಹ ಸಮಾನವಾದ ಪಾಲು ಇರುತ್ತದೆ ಎಂದರೆ ಸರಿ.

3. ನಾಗರಾಜ್ ಮತ್ತು ನನ್ನ ಗಂಡ ಬಸವರಾಜ್ ಅವರು ಮರಣಹೊಂದುವ ಕಾಲಕ್ಕೆ ಐಟಂ ನಂಬರ್ 1 ಮತ್ತು 2 ದಾವಾ ಆಸ್ತಿಗಳಲ್ಲಿ ಪಾಲುವಿಭಾಗ ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ . ಇಲ್ಲಿಯವರೆಗೂ ಸಹ ನಮ್ಮ ಕುಟುಂಬದಲ್ಲಿ ದಾವಾ ಆಸ್ತಿ ಐಟಂ ನಂಬರ್ 1 ಮತ್ತು 2 ಆಸ್ತಿಗಳಲ್ಲಿ ಪಾಲುವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಐಟಂ ನಂಬರ್ 1 ಮತ್ತು 2 ಆಸ್ತಿಗಳಲ್ಲಿ ಯಾವಾಗ ಪಾಲುವಿಭಾಗ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ . ಯಾವ ದಾಖಲೆಗಳ ಆಧಾರದ ಮೇಲೆ ದಾವಾ ಆಸ್ತಿಗಳಲ್ಲಿ ಪಾಲುವಿಭಾಗ ಆಗಿರುತ್ತದೆ ಎಂದು ತಿಳಿಸಿರುತ್ತೀರಿ ಎಂದರೆ ಸಾಕ್ಷಿ ಪಹಣಿಗಳ ಆಧಾರದ ಮೇಲೆ ತಿಳಿಸಿದ್ದೇನೆ ಎಂದು ಹೇಳುತ್ತಾರೆ . ನನ್ನ ಗಂಡ ಬಸವರಾಜ್, ವಾದಿ 2 ಸುಧಾ ಮತ್ತು ಮೃತ ನಾಗರಾಜ್ ಅವರ ನಡುವೆ ಪಾಲುವಿಭಾಗ ಆಗಿರುತ್ತದೆ . ಸದರಿ ಪಾಲುವಿಭಾಗ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ . ಈಗ ಸಾಕ್ಷಿಗೆ ತನ್ನ ಸಾಕ್ಷಿಯಲ್ಲಿ ಸಲ್ಲಿಸಿರುವ ದಾಖಲೆ ನಿಡಿ 1 ರಿಂದ 27 ದಾಖಲೆಗಳನ್ನು ತೋರಿಸಿದಾಗ ಸಾಕ್ಷಿ ನಿಡಿ 4 ಪಹಣಿಯನ್ನು ನೋಡಿ ತಮ್ಮ ಹೆಸರಿಗೆ ಆಗಿರುತ್ತದೆ ಎಂದು ಹೇಳುತ್ತಾರೆ . ಈ ಎಲ್ಲಾ ವಿಷಯಗಳನ್ನು ನನ್ನ ತಕರಾರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿ ನಮ್ಮ ಹೆಸರಿಗೆ ಆಗಿರುವ ಬಗ್ಗೆ ಮಾತ್ರ ತಿಳಿಸಿರುತ್ತೇನೆ ಎಂದು ಹೇಳುತ್ತಾರೆ . ಇದೇ ಮೊದಲ ಬಾರಿಗೆ ಸದರಿ ಪಾಲುವಿಭಾಗ ಬಗ್ಗೆ ತಿಳಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ .

4. ವಾದಿ 1 ರವರು ಜೀವಂತ ಇರುವ ಕಾಲಕ್ಕೆ ದಾವಾ ಆಸ್ತಿಗಳ ಬಗ್ಗೆ ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಲು ಜಗಳೂರು ತಹಶೀಲ್ದಾರಿಗೆ ಅರ್ಜಿ ನೀಡಿರುತ್ತೀರಿ ಎಂದರೆ ಸಾಕ್ಷಿ ಅರ್ಜಿ ನೀಡಿರುವುದಿಲ್ಲ ವಾದಿ 1 ರವರೇ ನಮ್ಮ ಹೆಸರಿಗೆ ಖಾತೆ ಮಾಡಲು ಅರ್ಜಿ ನೀಡಿರುತ್ತಾರೆ ಎಂದು ಹೇಳುತ್ತಾರೆ. ಈ ವಿಷಯವನ್ನು ತಕರಾರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಇದೇ ಮೊದಲ ಭಾರಿಗೆ ನಾನು ಸದರಿ ವಿಷಯವನ್ನು ನಾನು ನ್ಯಾಯಾಲಯಕ್ಕೆ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿ 1 ರವರು ಜೀವಂತ ಇರುವಾಗಲೇ ನಾವು ನಮ್ಮ ಹೆಸರಿಗೆ ಖಾತೆ ಮಾಡಿಸಿರುತ್ತೇವೆ ಎಂದು ಈ ದಾವೆಯನ್ನು ನಮ್ಮ ವಿರುದ್ದ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿ 2 ರವರಿಗೂ ಸಹ ಸಮಾನವಾದ ಹಿಸ್ಸೆ

ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನ್ನ ಮಕ್ಕಳಾದ ಪ್ರತಿವಾದಿ 2 ಮತ್ತು 3 ರವರಿಗೂ ಸಹ ಸಮಾನವಾದ ಹಿಸ್ಸೆ ಇರುತ್ತದೆ ಎಂದರೆ ಸರಿ.

5. ವಾದಿ 1 ರತ್ನಮ್ಮ , ವಾದಿ 2 ಸುಧಾ ಮತ್ತು ನಮ್ಮ ನಡುವೆ ಸನ್ 2015, 2016, 2017 ರಲ್ಲಿ ದಾವಾ ಆಸ್ತಿಗೆ ಸಂಬಂದಿಸಿದ ಹಾಗೆ ಯಾವುದೇ ಪಾಲುವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಯಾವ ವರ್ಷದಂದು ನನ್ನ ಮತ್ತು ವಾದಿ 1 ಮತ್ತು 2 ನಡುವೆ ಪಾಲುವಿಭಾಗ ಆಗಿರುವ ಬಗ್ಗೆ ನನಗೆ ನೆನಪಿರುವುದಿಲ್ಲ . ನಾನು ಸದರಿ ಪಾಲುವಿಭಾಗ ಬಗ್ಗೆ ದಾಖಲೆಗಳನ್ನು ನೋಡಿರುವುದಿಲ್ಲ . ನಾನೇನಾದರು ದಾವಾ ಆಸ್ತಿಗಳು ನಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಲು ಅರ್ಜಿ ನೀಡಿರುತ್ತೀರ ಎಂದರೆ ಸಾಕ್ಷಿ ವಾದಿ 1 ರತ್ನಮ್ಮ ಅವರೇ ನೀಡಿರುತ್ತಾರೆ ಎಂದು ಹೇಳುತ್ತಾರೆ . ವಾದಿ 1 ರತ್ನಮ್ಮ ಅವರು ಖಾತೆ ಬದಲಾವಣೆ ಮಾಡಲು ಅರ್ಜಿ ನೀಡಿರುವುದಿಲ್ಲ, ನಾನೇ ಅರ್ಜಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

6. ವಾದಿ 1 ರತ್ನಮ್ಮ ಅವರಿಗೆ ಯಾವ ವರ್ಷದಂದು ಬ್ರೈನ್ ಸ್ಟ್ರೋಕ್ ಖಾಯಿಲೆ ಆಗಿರುತ್ತದೆ ಎಂದರೆ ಸಾಕ್ಷಿ ಆಗಿರುವುದಿಲ್ಲ ಎಂದು ಹೇಳುತ್ತಾರೆ . ವಾದಿ 1 ರತ್ನಮ್ಮ ಅವರು ಈ ದಾವೆಯನ್ನು ಬಿಟ್ಟು ನಮ್ಮ ವಿರುದ್ದ ಮತ್ತೊಂದು ದಾವೆ O.S. 66/2018 ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು ಪ್ರತಿವಾದಿಯಾಗಿದ್ದು , ವಕೀಲರ ಮೂಲಕ ಹಾಜರಾಗಿ ನನ್ನ ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆ O.S. 66/2018 ರಲ್ಲಿ ವಾದಿ ರತ್ನಮ್ಮ ಅವರು ತಮ್ಮ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿದ ಬಗ್ಗೆ ಮಾಹಿತಿ ಇರುತ್ತದೆ ಎಂದರೆ ಸಾಕ್ಷಿ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದು ಹೇಳುತ್ತಾರೆ . ನನ್ನತಕರಾರಿನಲ್ಲಿ ಸದರಿ ದಾಖಲೆಗಳು ಸುಳ್ಳು ಇರುತ್ತದೆ ಎಂದು ತಿಳಿಸಿರುತ್ತೇನೆ . ಇಲ್ಲಿಯವರೆಗೂ ದಾವಾ ಆಸ್ತಿಗಳಲ್ಲಿ ಪಾಲುವಿಭಾಗ ಆಗಿರುವುದಿಲ್ಲ ಎಂದರೆ ಸಾಕ್ಷಿ ನಮ್ಮ ಅತ್ತೆ ವಾದಿ 1 ರವರು ನಮ್ಮ ಹೆಸರಿಗೆ ಜಂಟಿ ಪಹಣಿ ಮಾಡಿರುತ್ತಾರೆ ಎಂದು ಹೇಳುತ್ತಾರೆ . ದಾವಾ ಆಸ್ತಿಗಳು ವಾದಿ 1 ರವರು ಸ್ವಯಾರ್ಜಿತ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿ 2 ಸುಧಾ ಮತ್ತು ನಮಗೂ ಎಲ್ಲಾರಿಗೂ ಸಮಾನವಾದ ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ನಮ್ಮ ತಕರಾರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ

ತಕರಾರಿನಲ್ಲಿ ಈ ವಿಷಯವನ್ನು ತಿಳಿಸದೇ ಇದ್ದರೂ ಕೂಡ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿ ರತ್ನಮ್ಮ ಅವರ ಆರೋಗ್ಯ ಸ್ಥಿತಿ ನೋಡಿಕೊಂಡು ನನ್ನ ಹೆಸರಿಗೆ ಜಂಟಿ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗಳಲ್ಲಿ ಜಂಟಿ ಖಾತೆ ಮಾಡಿಸಿಕೊಂಡಿರುವುದು ಕಾನೂನೂ ಬಾಹಿರ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಇರುವ ಮಾಹಿತಿ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿ 2 ಸುಧಾ ಅವರಿಗೂ ಸಹ ಸಮಾನವಾದ ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು